# ಕನ್ನಡ ವಿಶ್ವವಿದ್ಯಾಲಯ, ಹಂಪಿ
**ವಿದ್ಯಾರಣ್ಯ–೫೮೩ ೨೭೬**

## ಜನವರಿ ೧೧, ೨೦೧೬ರ ಸೋಮವಾರದಂದು ನಡೆದ ಕಾರ್ಯಕಾರಿ ಸಮಿತಿಯ ೧೮೧ನೇ ಸಭೆಯ ನಡೆವಳಿಗಳು

**ಸಭೆಯಲ್ಲಿ ಉಪಸ್ಥಿತರಿದ್ದವರು:**

೦೧. ಡಾ. ಮಲ್ಲಿಕಾ. ಎಸ್. ಘಂಟಿ, ಮಾನ್ಯ ಕುಲಪತಿಗಳು, ಕ.ವಿ.ಹಂ. : ಅಧ್ಯಕ್ಷರು
೦೨. ಡಾ. ಎ. ಮೋಹನ ಕುಂಟಾರ್, ಡೀನ್, ಭಾಷಾ ನಿಕಾಯ, ಕ.ವಿ.ಹಂ. : ಸದಸ್ಯರು
೦೩. ಡಾ. ಕೆ.ಎಂ. ಮೇತ್ರಿ, ಡೀನ್, ಸಮಾಜವಿಜ್ಞಾನಗಳ ನಿಕಾಯ, ಕ.ವಿ.ಹಂ. : ಸದಸ್ಯರು
೦೪. ಡಾ. ಹನುಮಣ್ಣ ನಾಯಕ ದೊರೆ, ಡೀನ್, ಲಲಿತಕಲೆಗಳ ನಿಕಾಯ, ಕ.ವಿ.ಹಂ.: ಸದಸ್ಯರು
೦೫. ಡಾ. ಪಿ. ಮಹಾದೇವಯ್ಯ, ಹಣಕಾಸು ಅಧಿಕಾರಿಗಳು, ಕ.ವಿ.ಹಂ. : ವಿಶೇಷ ಆಹ್ವಾನಿತರು
೦೬. ಡಾ. ಡಿ. ಪಾಂಡುರಂಗಬಾಬು, ಕುಲಸಚಿವರು, ಕ.ವಿ.ಹಂ. : ಪದನಿಮಿತ್ತ ಕಾರ್ಯದರ್ಶಿ

**ಸಭೆಯಲ್ಲಿ ಅನುಪಸ್ಥಿತರಿದ್ದವರು:**

೦೧. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು : ಸದಸ್ಯರು
೦೨. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆರ್ಥಿಕ ಇಲಾಖೆ, ಬೆಂಗಳೂರು : ಸದಸ್ಯರು
೦೩. ಸರ್ಕಾರದ ಕಾರ್ಯದರ್ಶಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು : ಸದಸ್ಯರು
೦೪. ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು : ಸದಸ್ಯರು
೦೫. ನಿರ್ದೇಶಕರು, ರಾಜ್ಯ ಪುರಾತತ್ವ ವಸ್ತುಸಂಗ್ರಹಾಲಯ ನಿರ್ದೇಶನಾಲಯ, ಮೈಸೂರು : ಸದಸ್ಯರು

ಸಭೆಯ ಆರಂಭದಲ್ಲಿ ಮಾನ್ಯ ಕುಲಸಚಿವರು ಕಾರ್ಯಕಾರಿ ಸಮಿತಿ ಸದಸ್ಯರನ್ನು ಸಭೆಗೆ ಸ್ವಾಗತಿಸಿದರು. ನಂತರ ಮಂಡಿಸಲಾದ ಕಾರ್ಯಸೂಚಿಯನ್ನು ಕುರಿತು ಚರ್ಚಿಸಿ ಈ ಕೆಳಕಂಡ ನಿರ್ಣಯಗಳನ್ನು ಕೈಗೊಳ್ಳಲಾಯಿತು.

**ದಿನಾಂಕ: ೨೬–೧೧–೨೦೧೫ ರಂದು ನಡೆದ ಕಾರ್ಯಕಾರಿ ಸಮಿತಿಯ ೧೮೦ನೇ ಸಭೆಯ ನಡೆವಳಿಗಳ ಸ್ಥಿರೀಕರಣ ಹಾಗೂ ಅನುಮೋದನೆ ನೀಡುವ ಕುರಿತು.**

**ನಿರ್ಣಯ:** ಮಂಡಿಸಲಾದ ನಡೆವಳಿಗಳನ್ನು ಪರಿಶೀಲಿಸಿ ನಿರ್ಣಯಗಳನ್ನು ಅನುಮೋದಿಸಲಾಯಿತು.

**ದಿನಾಂಕ: ೨೬–೧೧–೨೦೧೫ ರಂದು ನಡೆದ ಕಾರ್ಯಕಾರಿ ಸಮಿತಿಯ ೧೮೦ನೇ ಸಭೆಯ ನಡೆವಳಿಗಳ ಅನುಪಾಲನಾ ವರದಿಗೆ ಅನುಮೋದನೆ ನೀಡುವ ಕುರಿತು.**

**ನಿರ್ಣಯ:** ಮಂಡಿಸಲಾದ ನಡೆವಳಿಗಳ ಅನುಪಾಲನಾ ವರದಿಯನ್ನು ಅನುಮೋದಿಸಲಾಯಿತು.

**೧೮೧.೦೧. ದಿನಾಂಕ ೨೧–೧೨–೨೦೧೫ ರಂದು ನಡೆದ ಕನ್ನಡ ವಿಶ್ವವಿದ್ಯಾಲಯದ ೨೦೧೫–೧೬ನೇ ಸಾಲಿನ ೨ನೇ ತ್ರೈಮಾಸಿಕ ಅವಧಿಯ ಹಣಕಾಸು ಸಮಿತಿ ಸಭೆಯ ನಡೆವಳಿಗಳ ಸ್ಥಿರೀಕರಣ ಕೋರಿದೆ.**

**ನಿರ್ಣಯ:** ಮಂಡಿಸಲಾದ ಹಣಕಾಸು ಸಮಿತಿ ಸಭೆಯ ನಡೆವಳಿಗಳನ್ನು ಸ್ಥಿರೀಕರಿಸಿ ಅನುಮೋದಿಸಲಾಯಿತು.

**೧೮೧.೦೨. ದಿನಾಂಕ ೨೯–೧೨–೨೦೧೫ರಂದು ನಡೆದ ಡೀನ್ ಸಮಿತಿ ಸಭೆಯ ನಡೆವಳಿಗಳಿಗೆ ಸ್ಥಿರೀಕರಣ ಕೋರಿದೆ.**

**ನಿರ್ಣಯ:** ಮಂಡಿಸಲಾದ ಡೀನ್ ಸಮಿತಿ ಸಭೆಯ ನಡೆವಳಿಗಳನ್ನು ಸ್ಥಿರೀಕರಿಸಿ ಅನುಮೋದಿಸಲಾಯಿತು.

**೧೮೧.೦೩. ರೂಸಾ ಅನುದಾನದ ಪ್ರಸ್ತಾವಿಕ ಕಾರ್ಯಯೋಜನೆಗೆ ಅನುಮೋದನೆ ಕೋರಿದೆ.**

**ನಿರ್ಣಯ :** ಕಾಮಗಾರಿಗಳು, ಕಟ್ಟಡ ನವೀಕರಣ, ವಿದ್ಯುನ್ಮಾನ ಯಂತ್ರೋಪಕರಣಗಳ ಖರೀದಿ (ಇನ್ ಫ್ರಾಸ್ಟ್ರಕ್ಚರ್ ಡೆವಲಪಮೆಂಟ್ ಗ್ರಾಂಟ್, ಕಾಂಪೋನಂಟ್–೩) ಇತ್ಯಾದಿ ಕುರಿತು ಸುಮಾರು ೨೦ ಕೋಟಿ ರೂಪಾಯಿಗಳ ಕ್ರಿಯಾಯೋಜನೆ ಪ್ರಸ್ತಾವಗಳನ್ನು ರಾಷ್ಟ್ರೀಯ ಉಚ್ಚತರ ಶಿಕ್ಷಣ ಅಭಿಯಾನದ ಅನುದಾನಕ್ಕಾಗಿ ಉನ್ನತ ಶಿಕ್ಷಣ ಪರಿಷತ್ತಿನ ಮೂಲಕ ಸಲ್ಲಿಸಲಾಗಿದೆಯೆಂಬ ಸಮಗ್ರ ಮಾಹಿತಿಯನ್ನು ಕುಲಸಚಿವರು ಸಭೆಯ ಗಮನಕ್ಕೆ ತಂದರು. ಈ ಕ್ರಿಯಾಯೋಜನೆ ಪ್ರಸ್ತಾವಗಳನ್ನು ಗಮನಿಸಿದ ಸಭೆಯು ಅನುಮೋದನೆ ನೀಡಿತು.

**೧೮೧.೦೪. ೨೦೧೪–೧೫ನೇ ಸಾಲಿನಲ್ಲಿ ಹಂಚಿಕೆಯಾದ ಅನುದಾನದ ಮರುಹೊಂದಾಣಿಕೆಯ ಪ್ರಸ್ತಾವಗಳಿಗೆ ಅನುಮೋದನೆ ಕೋರಿದೆ.**

**ನಿರ್ಣಯ :** ಅನುದಾನದ ಮರುಹೊಂದಾಣಿಕೆಯ ಪ್ರಸ್ತಾವಗಳಿಗೆ ಅನುಮೋದನೆ ನೀಡಲಾಯಿತು.

**೧೮೧.೦೫. ದಿನಾಂಕ ೦೯.೧೨.೨೦೧೫ರಂದು ಡಾ.ಟಿ.ಆರ್. ಚಂದ್ರಶೇಖರಯ್ಯ, ವಿಶ್ರಾಂತ ಪ್ರಾಧ್ಯಾಪಕರು ಇವರು ನೀಡಿರುವ ಮನವಿ ಪತ್ರ ಕುರಿತು.**

**ನಿರ್ಣಯ :** ಲೆಕ್ಕಪರಿಶೋಧನಾ ವರದಿಯ ಆಧಾರದ ಮೇಲೆ ಮುಂದಿನ ಕ್ರಮವಹಿಸಲು ನಿರ್ಣಯಿಸಲಾಯಿತು.

**೧೮೧.೦೬. ೩೭೧ (ಜೆ) ಅನುಷ್ಠಾನದ ಪ್ರಸ್ತಾವಗಳಿಗೆ ಅನುಮೋದನೆ ನೀಡುವ ಕುರಿತು.**

**ನಿರ್ಣಯ :** ೩೭೧(ಜೆ) ಪ್ರಸ್ತಾವಗಳಿಗೆ ಅನುಮೊದನೆ ನೀಡಲಾಯಿತು. ಮುಂದುವರಿದು ಈ ಹಿಂದೆ ಹುದ್ದೆಗಳ ಹಂಚಿಕೆಯಲ್ಲಿ ಆಗಿರುವ ವ್ಯತ್ಯಾಸಗಳನ್ನು ಗಮನಿಸಿ ಸರಿಪಡಿಸಲು ಮೂರು ಜನ ಡೀನರು ಇರುವ ಸಮಿತಿಯನ್ನು ರಚಿಸಲಾಯಿತು. ಈ ಸಮಿತಿಗೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ(ಹೈ.ಕ.ಪ್ರ ಕೋಶ) ಅಧಿಕಾರಿಗಳಾದ ಶ್ರೀ ಲೋಕನಾಥ ಇವರನ್ನು ವಿಶೇಷ ತಜ್ಞರಾಗಿ ಆಹ್ವಾನಿಸಬೇಕೆಂದು ನಿರ್ಣಯಿಸಲಾಯಿತು. ತುರ್ತಾಗಿ ಸಭೆ ಸೇರಿ ಮುಂದಿನ ಕ್ರಮವಹಿಸಲು ಕುಲಸಚಿವರಿಗೆ ಸೂಚಿಸಲಾಯಿತು.

**೧೮೧.೦೭. ಕನ್ನಡ ವಿಶ್ವವಿದ್ಯಾಲಯದಲ್ಲಿ ಖಾಲಿ ಇರುವ ಮಂಜೂರಾದ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳ ನೇಮಕಾತಿ ಪ್ರಕ್ರಿಯೆಗೆ ಅನುಮೋದನೆ ನೀಡುವ ಕುರಿತು.**

**ನಿರ್ಣಯ :** ಅನುಮೋದನೆ ನೀಡಲಾಯಿತು.

**೧೮೧.೦೮. ಕನ್ನಡ ವಿಶ್ವವಿದ್ಯಾಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ೫೮ ಬೋಧಕೇತರ ಸಿಬ್ಬಂದಿ ಹುದ್ದೆಗಳನ್ನು ಮೇಲ್ದರ್ಜೆಗೇರಿಸುವ ಪ್ರಸ್ತಾವಕ್ಕೆ ಅನುಮೋದನೆ ನೀಡುವ ಕುರಿತು.**

**ನಿರ್ಣಯ :** ಕನ್ನಡ ವಿಶ್ವವಿದ್ಯಾಲಯದ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಪಾಲಿಸಲು ಸೂಚಿಸಿ ಅನುಮೋದನೆ ನೀಡಲಾಯಿತು.

**೧೮೧.೦೯. ತಾಂತ್ರಿಕ ವಿಭಾಗ ನಿರ್ವಹಿಸುತ್ತಿರುವ ಚಾಲ್ತಿಯಲ್ಲಿರುವ ಮತ್ತು ಹೊಸ ಕಾಮಗಾರಿಗಳ ಪ್ರಸ್ತಾವಗಳಿಗೆ ಅನುಮೋದನೆ ನೀಡುವ ಕುರಿತು.**

**ನಿರ್ಣಯ :** ತಾಂತ್ರಿಕ ವಿಭಾಗವು ನಿರ್ವಹಿಸುತ್ತಿರುವ ಚಾಲ್ತಿಯಲ್ಲಿರುವ ಹಾಗೂ ಹೊಸ ಕಾಮಗಾರಿಗಳ ಪ್ರಸ್ತಾವಗಳಿಗೆ ಅನುಮೋದನೆ ನೀಡಲಾಯಿತು.

**೧೮೧.೧೦. ವಿಶ್ವವಿದ್ಯಾಲಯದ ಅಧ್ಯಯನ ವಿಭಾಗಗಳು, ಆಡಳಿತ ಕಚೇರಿಗಳು ಮತ್ತು ವಿದ್ಯಾರ್ಥಿಗಳಿಗೆ ಗಣಕಯಂತ್ರ, ಕ್ಯಾಮರಾ, ಐಮ್ಯಾಟ್ರಿಕ್, ಬಯೋಮ್ಯಾಟ್ರಿಕ್ ಹಾಗೂ ಇತರೆ ಯಂತ್ರೋಪಕರಣಗಳ ಖರೀದಿಗೆ ಅನುಮೋದನೆ ನೀಡುವ ಕುರಿತು.**

**ನಿರ್ಣಯ :** ಅನುಮೋದನೆ ನೀಡಲಾಯಿತು.

**೧೮೧.೧೧. ಕನ್ನಡ ವಿಶ್ವವಿದ್ಯಾಲಯದಲ್ಲಿ ಬಂಜಾರ ಭಾಷಾ ಅಭಿವೃದ್ಧಿ ಕೇಂದ್ರವನ್ನು ಸ್ಥಾಪಿಸುವ ಪ್ರಸ್ತಾವಗಳಿಗೆ ಅನುಮೋದನೆ ನೀಡುವ ಕುರಿತು.**

**ನಿರ್ಣಯ :** ಕನ್ನಡ ವಿಶ್ವವಿದ್ಯಾಲಯದ ಭಾಗವಾಗಿ ಬಂಜಾರ ಭಾಷಾ ಅಭಿವೃದ್ಧಿ ಕೇಂದ್ರವನ್ನು ಸ್ಥಾಪಿಸಲು ಸಲ್ಲಿಸಲಾಗುವ ಪ್ರಸ್ತಾವಕ್ಕೆ ಅನುಮೋದನೆ ನೀಡಲಾಯಿತು.

**೧೮೧.೧೨. ಪ್ರಸಾರಾಂಗದ ಪುಸ್ತಕಗಳ ಮರುಮುದ್ರಣಕ್ಕೆ ಇ-ಟೆಂಡರ್ ಪ್ರಕ್ರಿಯೆಯ ಪ್ರಸ್ತಾವಕ್ಕೆ ಅನುಮೋದನೆ ನೀಡುವ ಕುರಿತು.**

**ನಿರ್ಣಯ :** ಇ–ಟೆಂಡರ್ ಪ್ರಕ್ರಿಯೆಗೆ ಅನುಮೋದನೆ ನೀಡಲಾಯಿತು. ಮುಂದುವರಿದು ಮಾನ್ಯ ಕುಲಪತಿಯವರ ಗಮನಕ್ಕೆ ತರದೆ ಪ್ರಸಾರಾಂಗ, ಅಧ್ಯಯನಾಂಗ, ಚಿತ್ರಕಲೆ, ದೂರಶಿಕ್ಷಣ ನಿರ್ದೇಶನಾಲಯದ ಅಧಿಕಾರಿಗಳು ತಮ್ಮ ಮಾತುಗಳನ್ನು ಪುಸ್ತಕಗಳಲ್ಲಿ ಸೇರಿಸದಂತೆ ಹಾಗೂ ಭಾವಚಿತ್ರಗಳನ್ನು ಅಳವಡಿಸದಂತೆ ಸುತ್ತೋಲೆ ಹೊರಡಿಸಲು ಸೂಚಿಸಿತು.

**೧೮೧.೧೩. ಹೈದ್ರಾಬಾದ್ ಕರ್ನಾಟಕ ಅಭಿವೃದ್ಧಿ ನಿಗಮಕ್ಕೆ ಸಲ್ಲಿಸುವ ಪ್ರಸ್ತಾವಕ್ಕೆ ಅನುಮೋದನೆ ನೀಡುವ ಕುರಿತು.**

**ನಿರ್ಣಯ :** ಅನುಮೋದಿಸಲಾಯಿತು.

**೧೮೧.೧೪. ಈ ಹಿಂದೆ ವಿಶೇಷ ಘಟಕ ಯೋಜನೆ (ಎಸ್‌ಸಿಪಿ), ಗಿರಿಜನ ಉಪ ಯೋಜನೆ (ಟಿಎಸ್‌ಪಿ) ಅನುದಾನ ಮತ್ತಿತರ ಮೂಲಗಳಿಂದ ವಿದ್ಯಾರ್ಥಿಗಳಿಗೆ ಒದಗಿಸಿರುವ ಲ್ಯಾಪ್‌ಟಾಪ್‌ಗಳನ್ನು ವಿದ್ಯಾರ್ಥಿಗಳು ವಿಶ್ವವಿದ್ಯಾಲಯಕ್ಕೆ ಹಿಂತಿರುಗಿಸದೇ ತಮ್ಮ ಬಳಕೆಗೆ ಬಿಟ್ಟುಕೊಡುವಂತೆ ಕೇಳುತ್ತಿರುವುದಕ್ಕೆ ನಿರ್ದೇಶನ ಕೋರಿದೆ.**

**ನಿರ್ಣಯ :** ವಿಶೇಷ ಘಟಕ ಯೋಜನೆ (ಎಸ್‌ಸಿಪಿ), ಗಿರಿಜನ ಉಪ ಯೋಜನೆ (ಟಿಎಸ್‌ಪಿ) ಅನುದಾನ ಮತ್ತಿತರ ಮೂಲಗಳಿಂದ ವಿದ್ಯಾರ್ಥಿಗಳಿಗೆ ಒದಗಿಸಿರುವ ಲ್ಯಾಪ್‌ಟಾಪ್‌ಗಳನ್ನು ವಿದ್ಯಾರ್ಥಿಗಳು ವಿಶ್ವವಿದ್ಯಾಲಯಕ್ಕೆ ಹಿಂತಿರುಗಿಸದೇ ವಿದ್ಯಾರ್ಥಿಗಳ ಬಳಕೆಗೆ ಬಿಟ್ಟುಕೊಡಲು ಅನುಮೋದನೆ ನೀಡಲಾಯಿತು.

**೧೮೧.೧೫. ಕುಲಸಚಿವರು ಮತ್ತು ಇತರೆ ಶಾಸನಾತ್ಮಕ ಅಧಿಕಾರಿಗಳು ಬೆಂಗಳೂರು ಮತ್ತಿತರ ಕಡೆಯ ವಾಸ್ತವ್ಯದ ನಿಜವೆಚ್ಚಗಳ ಪಾವತಿಗೆ ಸಂಬಂಧಿಸಿ ಅನುಮೋದನೆ ನೀಡುವ ಕುರಿತು.**

**ನಿರ್ಣಯ :** ಅನುಮೋದಿಸಲಾಯಿತು.

**೧೮೧.೧೬. ಮಾರಾಟ ಮಳಿಗೆ ನಿರ್ವಹಣೆಗೆ ಮತ್ತು ಕ್ಯಾಂಟೀನ್‌ಗಳ ಬಾಡಿಗೆ ಮತ್ತು ನಿರ್ವಹಣೆಯ ಕುರಿತು.**

**ನಿರ್ಣಯ :** ಬಾಡಿಗೆಯನ್ನು ನೀಡುತ್ತಿರುವ ಬಗ್ಗೆ ಆಯಾ ಬಳಕೆದಾರರಿಂದ ಮಾಹಿತಿಯನ್ನು ಪಡೆದು ಮುಂದಿನ ಸೂಕ್ತ ಕ್ರಮವಹಿಸಲು ಅನುಮೋದಿಸಲಾಯಿತು.

## ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು

**೧೮೧.೧೭. ಡಾ.ಎಚ್.ಎನ್. ಕೃಷ್ಣೇಗೌಡ, ಡಾ. ಗೋವಿಂದ ಮತ್ತು ಶ್ರೀಮತಿ ಎಂ. ಜ್ಯೋತಿ, ತಾತ್ಕಾಲಿಕ ಅಧ್ಯಾಪಕರು ಇವರುಗಳು ನೀಡಿರುವ ಮನವಿ ಪತ್ರ ಕುರಿತು.**

**ನಿರ್ಣಯ :** ಸದ್ಯಕ್ಕೆ ಯಥಾಸ್ಥಿತಿಯನ್ನು ಮುಂದುವರಿಸಿಕೊಂಡು ಹೋಗಲು ನಿರ್ಣಯಿಸಲಾಯಿತು.

**೧೮೧.೧೮. ಸಂಗಿತ ಮತ್ತು ನೃತ್ಯ ವಿಭಾಗದಲ್ಲಿ ಕೆಲಸ ಮಾಡುತ್ತಿರುವ ತಾತ್ಕಾಲಿಕ ಸಿಬ್ಬಂದಿಗಳ ವೇತನ ಹೆಚ್ಚಿಸುವ ಕುರಿತು ಮನವಿ ಪತ್ರ ಕುರಿತು.**

**ನಿರ್ಣಯ :** ಸದ್ಯಕ್ಕೆ ಯಥಾಸ್ಥಿತಿಯನ್ನು ಮುಂದುವರಿಸಿಕೊಂಡು ಹೋಗಲು ನಿರ್ಣಯಿಸಲಾಯಿತು.

**೧೮೧.೧೯. ಸಂಗಿತ ಮತ್ತು ನೃತ್ಯ ವಿಭಾಗಕ್ಕೆ ತಾತ್ಕಾಲಿಕ ತಬಲ ಸಾಥಿದಾರರ ನೇಮಕಾತಿ ಕುರಿತು.**

**ನಿರ್ಣಯ :** ಅಗತ್ಯತೆಯನ್ನು ಗಮನದಲ್ಲಿರಿಸಿಕೊಂಡು ತಾತ್ಕಾಲಿಕ ತಬಲ ಸಾಥಿದಾರರ ನೇಮಕಾತಿಗೆ ಕ್ರಮಬಹಿಸಬಹುದೆಂದು ನಿರ್ಣಯಿಸಲಾಯಿತು.

**೧೮೧.೨೦. ಶ್ರೀ ಸೋಮನಾಥ ಹೆಚ್.ಎಂ., ಅಧೀಕ್ಷಕರು ಇವರನ್ನು ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದಲ್ಲಿ ಖಾಲಿ ಇರುವ ಸೆಕ್ಷನ್ ಆಫೀಸರ್ ಹುದ್ದೆಗೆ ಪ್ರತಿನಿಯೋಜನೆ ಕುರಿತು.**

**ನಿರ್ಣಯ :** ಸರ್ಕಾರದ ಪ್ರತಿನಿಯೋಜನೆ ನಿಯಮಗಳಿಗನುಸಾರವಾಗಿ ಶ್ರೀ ಸೋಮನಾಥ ಹೆಚ್.ಎಂ., ಅಧೀಕ್ಷಕರು ಇವರನ್ನು ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದಲ್ಲಿ ಖಾಲಿ ಇರುವ ಸೆಕ್ಷನ್ ಆಫೀಸರ್ ಹುದ್ದೆಗೆ ಪ್ರತಿನಿಯೋಜನೆ ಮೇಲೆ ಕಳುಹಿಸಲು ಒಪ್ಪಿಗೆ ನೀಡಲಾಯಿತು.

**೧೮೧.೨೧. ಗ್ರಂಥಾಲಯ ಡಿಜಟಲೀಕರಣ ಪ್ರಕ್ರಿಯೆಗೆ ತಾತ್ಕಾಲಿಕ ಕಂಪ್ಯೂಟರ್ ನಿರ್ವಹಣೆಗೆ ಸಿಬ್ಬಂದಿ ನೇಮಕಾತಿ ಕುರಿತು.**

**ನಿರ್ಣಯ :** ತಾತ್ಕಾಲಿಕ ನೇಮಕಾತಿ ಮಾಡಿಕೊಳ್ಳಲು ಅನುಮೋದಿಸಲಾಯಿತು.

**೧೮೧.೨೨. ಡಾ. ವಿಜಯ್ ಪೂಣಚ್ಚ ತಂಬಂಡ, ಪ್ರಾಧ್ಯಾಪಕರು ಚರಿತ್ರೆ ವಿಭಾಗ ಇವರ 'ರಾಜೇಂದ್ರನಾಮೆ ಮರು ಓದು' ಎನ್ನುವ ಸಂಶೋಧನಾ ಯೋಜನೆಗೆ ದಿನಾಂಕ ೦೧-೦೪-೨೦೧೬ ರಿಂದ ೩೧-೦೩-೨೦೧೭ ಒಂದು ವರ್ಷ ಸೆಬಾಟಿಕಲ್ ರಜೆ ಕುರಿತು.**

**ನಿರ್ಣಯ :** ಡಾ.ವಿಜಯ್ ಪೂಣಚ್ಚ ತಂಬಂಡ, ಪ್ರಾಧ್ಯಾಪಕರು ಚರಿತ್ರೆ ವಿಭಾಗ ಇವರಿಗೆ ದಿನಾಂಕ:೦೧-೦೪-೨೦೧೬ ರಿಂದ ೩೧-೦೩-೨೦೧೭ರ ವರೆಗೆ ಒಂದು ವರ್ಷ ಸೆಬಾಟಿಕಲ್ ರಜೆಯನ್ನು ನಿಯಮಾನುಸಾರ ಮಂಜೂರು ಮಾಡಲು ಅನುಮೋದಿಸಲಾಯಿತು. ಈ ಅವಧಿಯಲ್ಲಿ 'ರಾಜೇಂದ್ರನಾಮೆ ಮರು ಓದು' ಎನ್ನುವ ಸಂಶೋಧನಾ ಯೋಜನೆ ಪೂರೈಸಿ ಹಸ್ತಪ್ರತಿಯನ್ನು ಆಡಳಿತಾಂಗಕ್ಕೆ ಸಲ್ಲಿಸಬೇಕೆಂದು ಸೂಚಿಸಲಾಯಿತು.

**೧೮೧.೨೩. ಕನ್ನಡ ವಿಶ್ವವಿದ್ಯಾಲಯದಲ್ಲಿ ಸೇವೆ ಸಲ್ಲಿಸುತ್ತಿರುವ 'ಡಿ' ವೃಂದದ ನೌಕರರಿಗೆ ಒಂದು ಜೊತೆ ಖಾದಿ ವಸ್ತ್ರ ಒದಗಿಸಲು ಕಾರ್ಯಕಾರಿ ಸಮಿತಿ ಅನುಮೋದನೆ ಕೋರಿದೆ.**

**ನಿರ್ಣಯ :** ಅನುಮೋದಿಸಲಾಯಿತು.

**೧೮೧.೨೪. ಬೋಧಕ ಸಿಬ್ಬಂದಿ ರಜೆ ಸೌಲಭ್ಯಗಳ ಕುರಿತು.**

**ನಿರ್ಣಯ :** ೧. ಬೋಧಕ ಸಿಬ್ಬಂದಿ ರಜೆ ಸೌಲಭ್ಯಗಳ ಕುರಿತು ಚರ್ಚಿಸಿ ನಿಯಮಾವಳಿಗಳನ್ನು ರೂಪಿಸಲು ಡಾ.ರಹಮತ್ ತರೀಕೆರೆ, ಪ್ರಾಧ್ಯಾಪಕರು ಇವರು ಅಧ್ಯಕ್ಷರಾಗಿರುವ ಸಮಿತಿಯನ್ನು ರಚಿಸಲಾಯಿತು. ಈ ಸಮಿತಿಯಲ್ಲಿ ಡಾ.ಸಿ.ಎಸ್.ವಾಸುದೇವನ್, ಪ್ರಾಧ್ಯಾಪಕರು, ಡಾ.ಸಿ.ಮಹದೇವ, ಪ್ರಾಧ್ಯಾಪಕರು ಇವರು ಸದಸ್ಯರಾಗಿರುತ್ತಾರೆ. ಉಪಕುಲಸಚಿವರು(ಶೈಕ್ಷಣಿಕ) ಇವರು ಈ ಸಮಿತಿಯ ಸಂಚಾಲಕರಾಗಿರುತ್ತಾರೆ. ಈ ಕುರಿತು ಅಧಿಸೂಚನೆ ಹೊರಡಿಸಲು ಕುಲಸಚಿವರಿಗೆ ತಿಳಿಸಲಾಯಿತು.

೨. ಅಧ್ಯಯನ ಯೋಜನೆಗಳ ಕ್ಷೇತ್ರಕಾರ್ಯದ ಆದೇಶಿತ ರಜೆಗಳಿಗೆ ಸಂಬಂಧಿಸಿ ಅಧ್ಯಾಪಕರು ತಮ್ಮ ಯೋಜನೆಗಳ ಪ್ರಸ್ತಾವನೆಗಳನ್ನು ಸಲ್ಲಿಸುವಾಗ ಸಂಭಾವ್ಯ ಕ್ಷೇತ್ರ ಕಾರ್ಯದ ಅಂದಾಜು ಆದೇಶಿತ ರಜೆಗಳ ವಿವರಗಳನ್ನು ಒದಗಿಸಬೇಕು. ಈಗ ಚಾಲ್ತಿಯಲ್ಲಿರುವ ಯೋಜನೆಗಳಿಗೆ ಸಂಬಂಧಿಸಿ ಪ್ರಸ್ತುತ ೨೦೧೫-೧೬ನೇ ಸಾಲಿನಲ್ಲಿ ಅಧ್ಯಯನ ಯೋಜನೆಗಳಿಗೆ ಪಡೆದಿರುವ ಆದೇಶಿತ ರಜೆಯ ವಿವರಗಳನ್ನು ಮತ್ತು ಮಾರ್ಚ್ ೩೧ ರವರೆಗೆ ಅಗತ್ಯವಿರುವ ರಜೆಗಳನ್ನು ಡೀನ್‌ರ ಮೂಲಕ ಆಡಳಿತಾಂಗಕ್ಕೆ ಸಲ್ಲಿಸುವಂತೆ ಸೂಚಿಸಲಾಯಿತು.

**೧೮೧.೨೫. ನಿಕಾಯದ ಡೀನರುಗಳ ಕಾರ್ಯನಿರ್ವಹಣೆ ಕುರಿತು.**

**ನಿರ್ಣಯ :** ಆಯಾ ನಿಕಾಯದ ಡೀನರ ಮೂಲಕ ಎಲ್ಲ ಶೈಕ್ಷಣಿಕ ವಿಭಾಗಗಳ ಯೋಜನೆಗಳು, ಎಂ.ಫಿಲ್ ಮತ್ತು ಪಿಎಚ್.ಡಿ ಹಾಗೂ ಅಧ್ಯಾಪಕರ ಆದೇಶಿತ/ಅನ್ಯಕಾರ್ಯನಿಮಿತ್ತ ರಜೆಗಳ ಕಡತಗಳು ಬರುವುದು ಸೂಕ್ತವೆಂದು ನಿರ್ಣಯಿಸಲಾಯಿತು. ಇತ್ತೀಚೆಗೆ ರೂಪಿಸಿರುವ ರಜೆ ಅರ್ಜಿ ನಮೂನೆಗಳನ್ನು ಪರಿಷ್ಕರಿಸುವುದು ಅವಶ್ಯವೆಂದು ತೀರ್ಮಾನಿಸಲಾಯಿತು.

**೧೮೧.೨೬. ಶ್ರೀ ಪಿ.ಎಸ್. ಕರುಣಾಕರ ಇವರ ಅಮಾನತ್ತಿಗೆ ಸಂಬಂಧಿಸಿದ ಆರೋಪಗಳಿಗೆ ಸದರಿಯವರು ನೀಡಿರುವ ಪ್ರತಿಕ್ರಿಯೆ ಕುರಿತು.**

**ನಿರ್ಣಯ :** ಶ್ರೀ ಪಿ.ಎಸ್.ಕರುಣಾಕರ ಇವರ ಅಮಾನತ್ತಿಗೆ ಸಂಬಂಧಿಸಿದಂತೆ ಆರೋಪಗಳಿಗೆ ಸದರಿಯವರು ನೀಡಿರುವ ಪ್ರತಿಕ್ರಿಯೆಗಳು ಸಮಂಜಸವಾಗಿರುವುದಿಲ್ಲವೆಂದು ನಿರ್ಣಯಿಸಲಾಯಿತು. ನಿಯಮಾನುಸಾರ ಕಂಡಿಕೆವಾರು ನಿಜವಿದೆ ಅಥವಾ ಇಲ್ಲ ಎಂಬ ಸ್ಪಷ್ಟ ಅಭಿಪ್ರಾಯ ನೀಡಲು ಮತ್ತೊಂದು ಅವಕಾಶ ನೀಡಿ ವಿವರಣೆ ಕೇಳಿ ನೋಟಿಸ್ ಜಾರಿಮಾಡಬೇಕೆಂದು ತೀರ್ಮಾನಿಸಲಾಯಿತು. ಅವರಿಂದ ವಿವರಣೆ ಬಂದ ನಂತರ ನಿವೃತ್ತ ನ್ಯಾಯಾಧೀಶರೊಬ್ಬರನ್ನು ವಿಚಾರಣೆ ನಡೆಸಲು ನೇಮಿಸಬೇಕೆಂದು ನಿರ್ಣಯಿಸಲಾಯಿತು.

**೧೮೧.೨೭. ಶ್ರೀ ಬಿ. ವೆಂಕಟೇಶ, ಕಿರಿಯ ಸಹಾಯಕರು ಇವರ ತಾಯಿಯ ವೈದ್ಯಕೀಯ ವೆಚ್ಚ ರೂ. ೨೮,೮೯೬/-ಗಳ ಮರುಪಾವತಿ ಕೋರಿ ಸಲ್ಲಿಸಿದ ಮನವಿ.**

**ನಿರ್ಣಯ :** ಮರುಪಾವತಿಗೆ ಬರುವ ವೈದ್ಯಕೀಯ ವೆಚ್ಚಗಳನ್ನು ಗಮನಿಸಲಾಗಿ, ಸಿಬ್ಬಂದಿಗಳ ಸಾಮಾನ್ಯ ಚಿಕಿತ್ಸೆಯ ವೈದ್ಯಕೀಯ ವೆಚ್ಚ ಮರುಪಾವತಿ ಗರಿಷ್ಠ ರೂ.೧೦,೦೦೦/-, ಸಿಬ್ಬಂದಿಗಳ ಶಸ್ತ್ರಚಿಕಿತ್ಸೆ, ತೀವ್ರತರ ಅನಾರೋಗ್ಯಕ್ಕೆ ಸಂಬಂಧಿಸಿದಂತೆ ನಿಜವೆಚ್ಚವನ್ನು ಮರುಪಾವತಿಸುವುದು. ಸಿಬ್ಬಂದಿಗಳ ಕುಟುಂಬ ಸದಸ್ಯರ ವೈದ್ಯಕೀಯ ವೆಚ್ಚ ರೂ.೧೦,೦೦೦/- ಮೀರಿದ್ದಲ್ಲಿ ಆ ವೆಚ್ಚದ ಶೇಕಡ ೫೦ ರಷ್ಟು ಮೊತ್ತವನ್ನು ಮರುಪಾವತಿಸಬಹುದೆಂದು ನಿರ್ಣಯಿಸಲಾಯಿತು.

**೧೮೧.೨೮. ಮುಖ್ಯ ಕಡತಗಳ ನಿರ್ವಹಣೆ ಕುರಿತು.**

**ನಿರ್ಣಯ :** ಹಣಕಾಸು ವಿಭಾಗದ ಮುಖ್ಯ ಕಡತಗಳು, ಅಧ್ಯಯನಾಂಗ/ದೂರಶಿಕ್ಷಣ ನಿರ್ದೇಶನಾಲಯ/ಚಿತ್ರಕಲಾ ವಿದ್ಯಾಲಯಗಳ ನಿರ್ವಹಣಾ ಕೇಂದ್ರ ಇವುಗಳ ಪ್ರಮಾಣಪತ್ರಗಳು/ಅಂಕಪಟ್ಟಿಗಳ ಕಡತಗಳನ್ನು ಹಾಗೂ ತಾಂತ್ರಿಕ ವಿಭಾಗದ (ಸೆಕ್ಯುರಿಟಿ ಡಿಪಾಸಿಟ್‌ಗಳು, ಇ.ಎಂ.ಡಿ. ಒಪ್ಪಂದ ಪತ್ರಗಳು ಹಾಗೂ ಅಳತೆ ಪುಸ್ತಕಗಳಂಥ ಮುಖ್ಯ ದಾಖಲೆಗಳು ಇರುವ ಹಿನ್ನೆಲೆಯಲ್ಲಿ) ಕಡತಗಳನ್ನು ವಿಷಯ ನಿರ್ವಾಹಕರು ಅಥವಾ ಅಧಿಕಾರಿಗಳು ಕುಲಸಚಿವರಿಗೆ/ಕುಲಪತಿಗಳಿಗೆ ಅನುಮೋದನೆಗಾಗಿ ನೇರವಾಗಿ ತಂದು ಸಹಿಪಡೆದುಕೊಳ್ಳಬೇಕೆಂದು ನಿರ್ಣಯಿಸಲಾಯಿತು.

**೧೮೧.೨೯. ರಾಷ್ಟ್ರೀಯ ಉಚ್ಚತರ ಶಿಕ್ಷಣ ಅಭಿಯಾನ (ರೂಸಾ) ಶಾಖೆಗೆ ಸಂಯೋಜನಾಧಿಕಾರಿಯನ್ನು ನಿಯೋಜಿಸುವ ಕುರಿತು.**

**ನಿರ್ಣಯ :** ಕನ್ನಡ ವಿಶ್ವವಿದ್ಯಾಲಯವು ರಾಷ್ಟ್ರೀಯ ಉಚ್ಚತರ ಶಿಕ್ಷಣ ಅಭಿಯಾನದ ಅನುದಾನ ಪಡೆಯಲು ಪ್ರಸ್ತಾವಗಳನ್ನು ಸಲ್ಲಿಸಲಾಗಿದೆ. ಮೇಲಿಂದ ಮೇಲೆ ಪತ್ರವ್ಯವಹಾರಗಳನ್ನು ಮಾಡಬೇಕಾಗುತ್ತದೆ. ಸರ್ಕಾರವು ಕರೆಯುವ ಸಭೆಗಳಿಗೆ ಹಾಜರಾಗಿ ಮಾಹಿತಿ ನೀಡುವುದು/ವರದಿಗಳನ್ನು ಸಲ್ಲಿಸುವುದು ಮುಂತಾದ ಕೆಲಸಗಳನ್ನು ನಿರ್ವಹಿಸಲು ಒಬ್ಬ ಸಂಯೋಜನಾಧಿಕಾರಿಯ ಅವಶ್ಯಕತೆಯಿರುವುದನ್ನು ಮನಗಂಡು ಪ್ರಾಧ್ಯಾಪಕರು/ಸಹ ಪ್ರಾಧ್ಯಾಪಕರು ಇವರಲ್ಲಿ ಒಬ್ಬರನ್ನು ನಿಯೋಜಿಸಬೇಕೆಂದು ನಿರ್ಣಯಿಸಲಾಯಿತು.

**೧೮೧.೩೦. ಐ.ಕ್ಯೂ.ಎ.ಸಿ ಮತ್ತು ಮಾಹಿತಿ ಕೇಂದ್ರದ ವಾರ್ಷಿಕ ವರದಿಗಾಗಿ ಮಾಸಿಕವಾಗಿ ಮಾಹಿತಿ ಪಡೆಯುವ ನಮೂನೆಗಳ ಕುರಿತು.**

**ನಿರ್ಣಯ :** ಐ.ಕ್ಯೂ.ಎ.ಸಿ ಮತ್ತು ಮಾಹಿತಿ ಕೇಂದ್ರವು ವಿಭಾಗದ/ಅಧ್ಯಾಪಕರ ವಾರ್ಷಿಕ ವರದಿಗಾಗಿ ಮಾಹಿತಿ ಪಡೆಯಲು ನಮೂನೆಗಳನ್ನು ಸಿದ್ಧಪಡಿಸಿ ನೀಡಲಾಗುತ್ತಿದೆ. ಆದರೆ ಈ ಎರಡೂ ನಮೂನೆಗಳು ಒಂದಕ್ಕೊಂದು ಹೊಂದಾಣಿಕೆಯಾಗುತ್ತಿಲ್ಲ. ಇದನ್ನು ಗಮನಿಸಿದ ಸಭೆಯು ಪರಿಷ್ಕೃತ ಏಕರೂಪದ ನಮೂನೆಯನ್ನು ಸಿದ್ಧಪಡಿಸಲು ಎಲ್ಲ ನಿಕಾಯದ ಡೀನರು, ನಿರ್ದೇಶಕರು ಅಧ್ಯಯನಾಂಗ ಇವರು ಸದಸ್ಯರಾಗಿದ್ದು, ಸಹಾಯಕ ನಿರ್ದೇಶಕರು, ಮಾಹಿತಿ ಕೇಂದ್ರ ಇವರು ಸಂಚಾಲಕರಾಗಿರುವ ಉಪಸಮಿತಿಯನ್ನು ರಚಿಸಿ ಅನುಮೋದಿಸಲಾಯಿತು.

**೧೮೧.೩೧. ಪಿಎಚ್.ಡಿ ಪ್ರಬಂಧಗಳ ಮೌಲ್ಯಮಾಪನ ಮಾಡುವ ಕುರಿತು.**

**ನಿರ್ಣಯ :** ವಿಶ್ವವಿದ್ಯಾಲಯದ ಪ್ರಾಧ್ಯಾಪಕರು, ಸಹ ಪ್ರಾಧ್ಯಾಪಕರು ಮತ್ತು ಸಹಾಯಕ ಪ್ರಾಧ್ಯಾಪಕರು ನಿಯಮಾನುಸಾರ ಪಿಎಚ್.ಡಿ ಪ್ರಬಂಧಗಳ ಮೌಲ್ಯಮಾಪನ ಮಾಡಬೇಕೆಂದು ನಿರ್ಣಯಿಸಲಾಯಿತು. ಮುಂದಿನ ಕ್ರಮವನ್ನು ಆಯಾ ನಿಕಾಯದ ಡೀನ್ ಮತ್ತು ಅಧ್ಯಯನಾಂಗದ ನಿರ್ದೇಶಕರು ವಹಿಸಬೇಕೆಂದು ತೀರ್ಮಾನಿಸಲಾಯಿತು.

**೧೮೧.೩೨. ನುಡಿಹಬ್ಬ-೨೪ ಕುರಿತು.**

**ನಿರ್ಣಯ :** ೨೪ನೇ ನುಡಿಹಬ್ಬವನ್ನು ಆಯೋಜಿಸಲು ಘನತೆವೆತ್ತ ಮಾನ್ಯ ಕುಲಾಧಿಪತಿಗಳು ಹಾಗೂ ಕರ್ನಾಟಕದ ರಾಜ್ಯಪಾಲರು ಫೆಬ್ರವರಿ ೨೫, ೨೦೧೬ ದಿನಾಂಕವನ್ನು ನಿಗದಿಪಡಿಸಿರುವುದನ್ನು ಕುಲಪತಿಗಳು ಸಭೆಯ ಗಮನಕ್ಕೆತಂದರು. ನಾಡೋಜ ಗೌರವ ಪದವಿಗೆ ಸಂಭಾವ್ಯ ಹೆಸರುಗಳನ್ನು ಆಯ್ಕೆ ಮಾಡಲು ತಜ್ಞರ ಸಮಿತಿಯನ್ನು ರಚಿಸಬೇಕಾಗಿದೆ. ಈ ಸಮಿತಿಯನ್ನು ರಚಿಸುವ ಅಧಿಕಾರವನ್ನು ಮಾನ್ಯ ಕುಲಪತಿಗಳ ವಿವೇಚನೆಗೆ ಬಿಡಲಾಯಿತು. ಘಟಿಕೋತ್ಸವ ಭಾಷಣಕ್ಕಾಗಿ ಅತಿಥಿಗಳನ್ನಿ ನಿಗದಿಪಡಿಸುವ ಬಗೆಗೂ ಮಾನ್ಯ ಕುಲಪತಿಯವರ ವಿವೇಚನೆಗೆ ಬಿಡಲಾಯಿತು.

**೧೮೧.೩೩. ನ್ಯಾಕ್ ಪುನರ್ ಮೌಲ್ಯಮಾಪನಕ್ಕಾಗಿ ವರದಿಗಳನ್ನು ಸಿದ್ಧಪಡಿಸಲು ಸಮಿತಿಯನ್ನು ರಚಿಸುವ ಕುರಿತು.**

**ನಿರ್ಣಯ :** ಕನ್ನಡ ವಿಶ್ವವಿದ್ಯಾಲಯವನ್ನು ನ್ಯಾಕ್ ಸಂಸ್ಥೆಯ ಪುನರ್ ಮೌಲ್ಯಮಾಪನಕ್ಕೆ ಒಳಪಡಿಸುವ ಪೂರ್ವ ವರದಿಗಳನ್ನು ಸಿದ್ಧಪಡಿಸಬೇಕಾಗಿದೆ. ವರದಿಗಳನ್ನು ಸಿದ್ಧಪಡಿಸಲು ಐ.ಕ್ಯೂ.ಎ.ಸಿ.ಗೆ ರಚಿಸಲಾದ ಸಮಿತಿಯನ್ನೇ ನ್ಯಾಕ್ ಸಮಿತಿಯೆಂದು ಬದಲಾಯಿಸಲು ಹಾಗೂ ಎಲ್ಲ ನಿಕಾಯದ ಡೀನರನ್ನು ಈ ಸಮಿತಿಯಲ್ಲಿ ಸೇರಿಸಲು ತೀರ್ಮಾನಿಸಲಾಯಿತು. ಈ ಕುರಿತು ಅಧಿಸೂಚನೆ ಹೊರಡಿಸಲು ತಿಳಿಸಲಾಯಿತು.

**೧೮೧.೩೪. ಬೆಳಗಾವಿ ಗಡಿನಾಡ ಅಭಿವೃದ್ಧಿಗಾಗಿ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸುವ ಕುರಿತು.**

**ನಿರ್ಣಯ :** ನೆಲ, ಜಲ, ಸಾಹಿತ್ಯ ಸಂಸ್ಕೃತಿ ಮುಂತಾದ ವಿಷಯಗಳನ್ನು ಕುರಿತು ಅಧ್ಯಯನ ಕೈಗೊಳ್ಳಲು ಗಡಿನಾಡ ಭಾಗವಾದ ಬೆಳಗಾವಿಯಲ್ಲಿ ಕನ್ನಡ ವಿಶ್ವವಿದ್ಯಾಲಯದ ಅಧ್ಯಯನ ಕೇಂದ್ರವನ್ನು ಸ್ಥಾಪಿಸಲು ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸುವುದು ಅಗತ್ಯವಾಗಿದೆ. ಸೂಕ್ತ ಪ್ರಸ್ತಾವವನ್ನು ಸಿದ್ಧಪಡಿಸಲು ಡಾ.ಮೋಹನ ಕುಂಟಾರ, ಡೀನ್ ಭಾಷಾನಿಕಾಯ ಹಾಗೂ ಡಾ.ಅಶೋಕ ಕುಮಾರ ರಂಜೇರೆ, ಪ್ರಾಧ್ಯಾಪಕರು ಮತ್ತು ಕುಲಸಚಿವರು ಇರುವ ಒಂದು ಸಮಿತಿಯನ್ನು ರಚಿಸಲಾಯಿತು. ಈ ಕುರಿತು ಅಧಿಸೂಚನೆ ಹೊರಡಿಸಲು ಸೂಚಿಸಲಾಯಿತು.

ಕುಲಸಚಿವರ ವಂದನೆಗಳೊಂದಿಗೆ ಸಭೆಯು ಮುಕ್ತಾಯಗೊಂಡಿತು.

| | |
|---|---|
| **ಕುಲಸಚಿವರು** | **ಕುಲಪತಿಗಳು** |
| **(ಪದನಿಮಿತ್ತ ಕಾರ್ಯದರ್ಶಿ)** | **(ಅಧ್ಯಕ್ಷರು)** |